# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5037/2023 ಫ್ರಾಸಾ-14
ಚಾಸಾ-17

ದಿನಾಂಕಃ 20-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಈರಣ್ಣ |
| **ತಂದೆಯ / ಗಂಡನ ಹೆಸರು** | ಈರಕ್ಯಾತಪ್ಪ |
| **ವಯಸ್ಸು** | 48 |
| **ಉದ್ಯೋಗ** | ವ್ಯವಸಾಯ |
| **ವಾಸಸ್ಥಳ** | ಸೋಲನಾಯಕನಹಳ್ಳಿ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ನಿಪಿ-2 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಒಂದು ವರ್ಷದ ಹಿಂದೆ ನಿಪಿ-2 ಕ್ಕೆ ಬೂದಿಬೆಟ್ಟ ಗ್ರಾಮದ ಆರೋಪಿ ರಾಮಾಂಜಿ ಮನೆ ಹತ್ತಿರ ಸಹಿ ಮಾಡಿರುತ್ತೇನೆ. ಪೊಲೀಸರು ಮಹಜರ್ ಮಾಡಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಲಕ್ಷ್ಮೀ ಎನ್ನುವವರ ಕೊಲೆಯಾದುದ್ದರಿಂದ ಪೊಲೀಸರು ಮಹಜರ್ ಮಾಡುತ್ತಿದ್ದರು. ಬೂದಿಬೆಟ್ಟದ ರಾಮಾಂಜಿ ಮನೆ ಹತ್ತಿರ ಕೊಲೆ ಆದ ಜಾಗವಾಗಿರುತ್ತದೆ ಆ ಜಾಗದಲ್ಲಿ ಪಂಚನಾಮೆ ಮಾಡಿರುತ್ತಾರೆ. ಸದರಿ ಜಾಗದಲ್ಲಿ ಲಕ್ಷ್ಮೀ ಬಿದಿದ್ದು ತಲೆಗೆ ರಕ್ತಗಾಯವಾಗಿತ್ತು. ಆ ಸಮಯದಲ್ಲಿ ನಿಪಿ-3 ಮತ್ತು 4 ರಂತೆ ಪೋಟೊ ತೆಗೆದಿರುತ್ತಾರೆ. ನಿಪಿ-3 ರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ನಿಪಿ-3 ಮತ್ತು 4 ರಲ್ಲಿ ನನ್ನ ಜೊತೆ ಬೇರೆ ಯಾರು ಯಾರು ಇರುತ್ತಾರೆಂದು ನನಗೆ ಗೊತ್ತಿಲ್ಲ. ಪೊಲೀಸರು ಸ್ಥಳದಿಂದ ಏನನ್ನೂ ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಪಂಚನಾಮೆಯನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಮಾಡಿರುತ್ತಾರೆಂದು ನನಗೆ ಸಮಯ ಗೊತ್ತಿರುವುದಿಲ್ಲ. ನಿಪಿ-2 ರಲ್ಲಿ ಬರೆದ ವಿಷಯ ನನಗೆ ಗೊತ್ತಿರುವುದಿಲ್ಲ. ಪೊಲೀಸರಿಗೆ ಪಂಚನಾಮೆ ಕಾಲಕ್ಕೆ ಯಾರು ಮಾಹಿತಿ ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ. 16.08.2023 ರಂದು ಬೆಳಿಗ್ಗೆ 7-30 ರಿಂದ 8-30 ರವರೆಗೂ ರಾಮಾಂಜಿ ವಾಸ ಇದ್ದ ಮನೆ ಹತ್ತಿರ ನಾಗವೇಣಿ ರವರು ಹಾಜರಿದ್ದು ಅವರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಪೊಲೀಸರು ನಿಪಿ-2 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಶವ ಇದ್ದ ಜಾಗದ ಸುತ್ತಾ ಮುತ್ತಲೂ ಒಣಕೆ , ಚಾಕು , ಮನೆ ಒಳಗೆ ಚೂಡಿದಾರ , ಚಾಪೆ ಇತರೆ ವಸ್ತುಗಳು ಬಿದ್ದಿದ್ದವು, ಮನೆಯ ಮುಂದೆ ಇರುವ ಕಾಲು ದಾರಿಯಲ್ಲಿ ಮುರಿದಿರುವ ಒಣಕೆ ಬಿದ್ದಿತ್ತು, ಕಾಲು ದಾರಿಯ ನಂತರ ಎಕ್ಕೆ ಗಿಡದ ಹತ್ತಿರ ಒಂದು ಪ್ಲಾಸ್ಟಿಕ್ ಹಿಡಿಕೆ ಇರುವ ರಕ್ತದ ಕಲೆ ಆಗಿರುವ ಚಾಕು ಬಿದ್ದಿತ್ತು. ಆರೋಪಿ ಲಕ್ಷ್ಮೀಯನ್ನು ಕೊಲೆ ಮಾಡಿದ ನಂತರ ತಾನು ಕರೆಂಟ್ ಕಂಬದ ಪಕ್ಕ ತಾನು ಬದುಕುವುದಿಲ್ಲ ಎಂದು ಹೇಳಿ ತನ್ನ ಎಡಗೈ ನಾಡಿ ಬಳಿ ಕೊಯ್ದುಕೊಂಡಾಗ ಕೆಳಗೆ ರಕ್ತ ಬಿದ್ದು ಹೆಪ್ಪು ಕಟ್ಟಿರುವ ರಕ್ತ ಎಂದು ಪಿರ್ಯಾದಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ.
ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಮಾಹಿತಿ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು . ಆರೋಪಿ ಪರ ಶ್ರೀ ಪಿ.ಎನ್.ಆರ್. ವಕೀಲರಿಂದ**

ರಾಮಾಂಜಿ ಮನೆ ಮುಂದೆ ಚಪ್ಪಡಿ ಕಲ್ಲು ಇತ್ತು ಎಂದರೆ ಸರಿಯಲ್ಲ. ಪೊಟೋ ಯಾರು ತೆಗೆದಿರುತ್ತಾರೆಂದು ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**